ದಿನಾಂಕಃ **06-06-2024** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಶ್ರೀಮತಿ ಟಿ ಎನ್ ಎ ವಕೀಲರಿಂದಃ **1** ನೇ ಪ್ರತಿವಾದಿ ಪರವಾಗಿ

ನನ್ನ ತಂದೆ ಹೆಸರು ಸಿದ್ದಪ್ಪ. 3 ನೇ ಪ್ರತಿವಾದಿ ನನ್ನ ತಂದೆ ಎಂದರೆ ಸರಿ. ನನ್ನ ತಂದೆಗೆ 3 ಜನ ಮಕ್ಕಳು ನಾನು, ರಾಜಶೇಖರ್ ಮತ್ತು ನನ್ನ ತಂಗಿ ವನಿತಾ. ನನ್ನ ತಂಗಿ ವನಿತಾ ರವರು ಮಡೇನೂರು ಗ್ರಾಮದಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಲಕ್ಷ್ಮಮ್ಮ ಮೃತಪಟ್ಟಿರುತ್ತಾರೆ. ಅವರಿಗೆ ಪ್ರತಿವಾದಿ 1(ಎ) ಯಿಂದ 1(ಸಿ) ವರೆಗೂ ವಾರಸುದಾರರು. 1 ನೇ ಪ್ರತಿವಾದಿಗೆ 4 ಜನ ಮಕ್ಕಳು ಅವರುಗಳ ಹೆಸರು ಚಂದ್ರಶೇಖರ್, ಕುಮಾರಸ್ವಾಮಿ, ಅಕ್ಕಮಹಾದೇವಿ ಮತ್ತು ಶಂಕ್ರಮ್ಮ ಚಂದ್ರಶೇಖರ್, ಕುಮಾರಸ್ವಾಮಿ, ವರು ಮೃತಪಟ್ಟಿರುತ್ತಾರೆ. ಕುಮಾರಸ್ವಾಮಿಗೆ ಲಗ್ನವಾಗಿರುವುದಿಲ್ಲ. ಅಕ್ಕಮಹಾದೇವಿ ಮತ್ತು ಶಂಕ್ರಮ್ಮ ರವರು ಜೀವಂತವಾಗಿರುತ್ತಾರೆ. ಅದೇ ರೀತಿ 2 ನೇ ಪ್ರತಿವಾದಿ ಮೃತಪಟ್ಟಿರುತ್ತಾರೆ ಅವರ ಮಕ್ಕಳನ್ನು ಕೂಡ ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿ. ಅದೇ ರೀತಿ 4 ನೇ ಪ್ರತಿವಾದಿ ಮೃತಪಟ್ಟಿರುತ್ತಾರೆ. 4(ಎ) ಯಿಂದ 4(ಡಿ) ವರೆಗೂ 4 ನೇ ಪ್ರತಿವಾದಿಯ ಮಕ್ಕಳು. ಅವರುಗಳ ಹೆಸರು ಅಂಬಿಕ, ನಿರ್ಮಲ, ಮುನಿಸ್ವಾಮಿ ಮತ್ತು ರೂಪ. ಅವರೆಲ್ಲಾ ಜೀವಂತವಾಗಿದಾರೆ ಎಂದರೆ ಸರಿ. ನನ್ನ ತಂದೆ 2 ನೇ ಪ್ರತಿವಾದಿಯವರು ಅಣ್ಣತಮ್ಮಂದಿರು ಎಂದರೆ ಸರಿ. ನನ್ನ ತಾಯಿಯ ಹೆಸರು ಪಾಲಾಕ್ಷಮ್ಮ. 2 ನೇ ಪ್ರತಿವಾದಿಯ ಹೆಂಡತಿ ಹೆಸರು ನೀಲಮ್ಮ. 2 ಮತ್ತು 3 ನೇ ಪ್ರತಿವಾದಿಯವರು ಅಕ್ಕತಂಗಿಯರನ್ನು ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನೀಲಮ್ಮ ಮತ್ತು ಪಾಲಾಕ್ಷಮ್ಮ ರವರ ಮನೆಕಡೆಯಿಂದ ಬೆಡಗರಹಳ್ಳಿ ಗ್ರಾಮದಿಂದ ಆಸ್ತಿ ಕೊಟ್ಟಿರುತ್ತಾರೆ ಎಂದರೆ ಸರಿ. ನೀಲಮ್ಮ ಮತ್ತು ಪಾಲಾಕ್ಷಮ್ಮರವರಿಗೆ 15 ಎಕರೆ ಜಮೀನು ಅವರ ತಂದೆ ಕಡೆಯಿಂದ ಬಂದಿತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ಪಂಚಾಯತ್ ಪಾರಿಕತ್ ಮೂಲಕ ಸಮವಾಗಿ ದಿಃ 24-04-1998 ರಲ್ಲಿ ವಿಭಾಗ ಮಾಡಿಕೊಂಡಿದೀವಿ ಎಂದರೆ ಸರಿ. ಪಂಚಾಯತ್ ಪಾರಿಕತ್ ಪ್ರಕಾರ ನನ್ನ ತಾಯಿಗೆ ಮತ್ತು ನೀಲಮ್ಮರವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ.

ನನ್ನ ತಾತ ಶಂಕ್ರಪ್ಪರವರು ಪಿತ್ರಾರ್ಜಿತ ಆಸ್ತಿ ಹೊಂದಿರುವುದಿಲ್ಲ . ನನ್ನ ತಾತರವರು ಮನೆಅಳಿಯನಾಗಿ ನಾಗರಘಟ್ಟೆಗೆ ಹೋಗಿದ್ದರು ಎಂದರೆ ಸರಿ. ನನ್ನ ಅಜ್ಜಿಯ ಹೆಸರು ರಾಮಕ್ಕ. ನನ್ನ ಅಜ್ಜಿಯ ತಂದೆಯವರ ಆಸ್ತಿಯನ್ನು ನೋಡಿಕೊಳ್ಳುವುದಕ್ಕೋಸ್ಕರ ಅವರು ಅಲ್ಲಿ ಮನೆ ಅಳಿಯನಾಗಿ ಇದ್ದರು ಎಂದರೆ ಸರಿ. ಅವರು ಅಲ್ಲಿ ಆಸ್ತಿಗಳನ್ನು ನೋಡಿಕೊಂಡು ಅಲ್ಲೇ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆ 2 ನೇ ಮತ್ತು 3 ನೇ ಪ್ರತಿವಾದಿಯರ ಜೊತೆ ಒಟ್ಟಿಗೆ ಒಂದೇ ಮನೆಯಲ್ಲಿ ವಾಸವಿದ್ದರು.

ದಾವಾ ಆಸ್ತಿಗಳು ನನ್ನ ಅಜ್ಜಿಯಾದ ರಾಮಕ್ಕರವರಿಗೆ ಅವರ ತಂದೆಯಿಂದ ಬಂದಿರುವ ಆಸ್ತಿ ಎಂದರೆ ಸರಿ. 2 ನೇ ಪ್ರತಿವರಾದಿಯವರು ಅವರ ತಂದೆಯಾದ ಶಂಕ್ರಪ್ಪರವರ ಜೊತೆ ನಾಗರಘಟ್ಟದಲ್ಲಿ ವಾಸವಿದ್ದರು ಎಂದರೆ ಸಾಕ್ಷಿ ನಾವು ಕೂಡ ಅಲ್ಲೇ ಇದ್ವಿ ಎನ್ನುತ್ತಾರೆ. 2 ನೇ ಪ್ರತಿವಾದಿಯವರೇ ರಾಮಕ್ಕ ಮತ್ತು ಶಂಕ್ರಪ್ಪರವರನ್ನು ಪಾಲನೆ ಪೋಷಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 16-06-1997 ರಲ್ಲಿ ಶಂಕ್ರಪ್ಪ ರವರು ನೊಂದಾಯಿತ ವಲ್ಲದ ವಿಲ್ ಮೂಲಕ 2 ನೇ ಪ್ರತಿವಾದಿಯ ಹೆಸರಿಗೆ ಆಸ್ತಿಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ ಅಜ್ಜಿಯ ಆಸ್ತಿ ನನ್ನ ತಂದೆ ಹೇಗೆ ಬರೆದುಕೊಟ್ಟಿರುತ್ತಾರೆ ಎಂದು ಪ್ರಶ್ನೆ ಮಾಡಿರುತ್ತಾರೆ. ವಿಲ್ ಪ್ರಕಾರ 2 ನೇ ಪ್ರತಿವಾದಿಯವರು ಆಸ್ತಿಗಳನ್ನು ಅವರ ಹೆಸರಿಗೆ ಖಾತೆಯನ್ನು ಮಾಡಿಕೊಂಡು ಸ್ವಾಧೀನದಲ್ಲಿ ಇದಾರೆ ಎಂದರೆ ಸಾಕ್ಷಿ ನಾವು ಒಟ್ಟಿಗೆ ಇದೀವಿ ಭಾಗ ಕೇಳುವಾಗ ಭಾಗ ಇಲ್ಲ ಎಂದು ನನಗೆ ಹೇಳಿರುತ್ತಾರೆ. ದಾಖಲಾತಿಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾ ಸ್ವತ್ತುಗಳು ರಾಮಕ್ಕನಿಗೆ ಅವರ ತಂದೆಯಿಂದ ಬಂದಿರುವ ಆಸ್ತಿ.

2 ನೇ ಪ್ರತಿವಾದಿಯವರು ಅಸಲು ದಾವೆ 219/2003 ನ್ನು ಶಾಶ್ವತ ತಡೆಯಾಜ್ಞೆ ದಾವೆಯನ್ನು ಹೂಡಿ ನನ್ನ ತಂದೆಯ ವಿರುದ್ಧ ದಿಃ 03-06-2005 ರಂದು ಡಿಕ್ರಿಯನ್ನು ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಿರುವ ಹಾಗೆ ಪಡೆದಿದಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅಸಲು ದಾವೆ 205/2003 ನನ್ನ ತಂದೆ ಭಾಗ ಕೋರಿ 2 ನೇ ಪ್ರತಿವಾದಿಯ ವಿರುದ್ಧ ಹಾಕಿರುವ ಕೇಸು ದಿಃ 08-02-2006 ರಂದು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಬೆಡಗರಹಳ್ಳಿ ಆಸ್ತಿಯಲ್ಲಿ ಸರ್ವೆ ನಂ. 51 ಹೇಮಾವತಿ ಚಾನಲ್ ಗೆ ಹೋಗಿರುತ್ತದೆ ಎಂದರೆ ಸರಿ. ಈ ದಾವೆಯನ್ನು ಭಾಗ ಕೋರಿ ಹಾಕಿರುತ್ತೇನೆ. ಈ ದಾವೆಯಲ್ಲಿ ಎಲ್ಲಾ ಆಸ್ತಿಗಳು ಸೇರಿರುತ್ತವೆ ಎಂದರೆ ಸಾಕ್ಷಿ ನನ್ನ ತಂದೆಯ ಭಾಗದ ಆಸ್ತಿಗಳು ಸೇರಿರುತ್ತವೆ ಎನ್ನುತ್ತಾರೆ. ನಾನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ಈ ದಾವೆಯನ್ನು ಹಾಕಿರುವ ಅಂಶಗಳು ಕೂಡ ನಾನು ತಿಳಿದುಕೊಂಡಿರುತ್ತೇನೆ. ಒಟ್ಟು ಕುಟುಂಬದ ಆಸ್ತಿಗಳು ದಿಃ 24-04-1998 ರಲ್ಲಿ ವಿಭಾಗ ಆಗುವ ಮುಂಚೆನೇ 2 ನೇ ಪ್ರತಿವಾದಿಯ ಹೆಸರಿಗೆ ಶಂಕ್ರಪ್ಪರವರಿಂದ ದಿಃ 16-06-1997 ರಲ್ಲಿ ವಿಲ್ ಮುಖಾಂತರ ಬಂದಿರುವ ಆಸ್ತಿಗಳು ಎಂದು ಗೊತ್ತಿದ್ದರೂ ಕೂಡ ನಾನು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಹೂಡಿದೀನಿ ಎಂದರೆ ಸರಿಯಲ್ಲ. ನನ್ನ ತಂದೆ ಹೂಡಿರುವ ವಿಭಾಗದ ದಾವೆ ವಜಾ ಆಗಿರುವುದು ಗೊತ್ತಿದ್ದರೂ ಕೂಡ ಉದ್ದೇಶ ಪೂರ್ವಕವಾಗಿ ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಹೂಡಿದೀನಿ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಶ್ರೀಮತಿ ಟಿಎನ್ಎ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು
ತಿಪಟೂರು.